ಲೀಚೆನ್‌ಸ್ಟೇನ್ ರಾಜಧಾನಿ ವಾಡೂಜ್ ದಾರಿಯಲ್ಲಿ ಕಾಣುವ ಸುಂದರ ದೃಶ್ಯ





ದ್ರಾಕ್ಷಿ ತೋಟದೊಂದಿಗೆ ಸುಂದರ ಮನೆಗಳು

ರಮಣೀಯ ನಿಸರ್ಗ ಸೌಂದರ್ಯ ಆಸ್ವಾದಿಸುತ್ತಾ ಸಾಗುವ ಈ ದೇಶದ ಪ್ರಯಾಣ ನಿಜಕ್ಕೂ ಅವಿಸ್ಮರಣೀಯವಾದದ್ದು.

ವಿಶ್ವದ ಆರನೇ ಅತಿ ಚಿಕ್ಕ ದೇಶವಾದ ಲೀಚೆನ್‌ಸ್ಟೇನ್ ರಾಜಧಾನಿ ವಾಡೂಜ್. ಜರ್ಮನ್ ಇಲ್ಲಿನ ಭಾಷೆ. ಯುರೋಪ್ ಖಂಡದ ನಾಲ್ಕನೇ ಅತಿ ಸಣ್ಣ ದೇಶವಾದ ಇದಕ್ಕೆ ಸೈನ್ಯವಿಲ್ಲ. 160 ಚ.ಕಿ.ಮೀ ವಿಸ್ತೀರ್ಣದ ಈ ದೇಶದ ಜನಸಂಖ್ಯೆ ಕೇವಲ 37 ಸಾವಿರ. ಚಲಾವಣೆಯಲ್ಲಿರುವ ಹಣ ಸ್ವಿಸ್ ಫ್ರಾಂಕ್.

ಲೀಚೆನ್‌ಸ್ಟೇನ್ ದೇಶದ ರಕ್ಷಣೆ, ಆರ್ಥಿಕ ಪರಿಸ್ಥಿತಿ, ಆಮದು ರಫ್ತನ್ನು ಸ್ವಿಝರ್ಲ್ಯಾಂಡ್ ನಿಯಂತ್ರಿಸುತ್ತದೆ. ರೈಲ್ವೆ ಸಾರಿಗೆಯನ್ನು ನೆರೆಯ ಆಸ್ಟ್ರಿಯಾ ದೇಶ ನೋಡಿಕೊಳ್ಳುತ್ತದೆ. ಈ ದೇಶವನ್ನು 11 ನಗರಸಭೆಗಳಾಗಿ ವಿಂಗಡಿಸಿದ್ದು, ಅದರಲ್ಲಿ ರಾಜಧಾನಿ ವಾಡೂಜ್ ಅತ್ಯಂತ ದೊಡ್ಡದು. ಈ ಪುಟ್ಟ ದೇಶದ ರಾಜಧಾನಿಯ ಜನಸಂಖ್ಯೆ ಕೇವಲ 5100.

ತಲಾ ಆದಾಯ ಹೆಚ್ಚಿರುವ ವಿಶ್ವದ ಶ್ರೀಮಂತ ರಾಷ್ಟ್ರಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾದ ಲೀಚೆನ್‌ಸ್ಟೇನ್ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಅತ್ಯಲ್ಪ. ಈ ದೇಶದ ಆರ್ಥಿಕ ಉತ್ಪನ್ನದ ಬಹುಪಾಲು ಬ್ಯಾಂಕಿಂಗ್ ಕ್ಷೇತ್ರದಿಂದ